# ವಿಜಯವಾಣಿ

ಕನ್ನಡಿಗರ ಧ್ವನಿ

**Date: 17.10.2019**

**Edition: Bengaluru (Gramanthara)**

## Newspaper - Vijayavani

# ದೇಶ ಉನ್ನತ ಸ್ಥಾನಕ್ಕೇರಲು ಶ್ರಮಿಸಿ



ಆನೇಕಲ್‌ನ ಶ್ರೀ ಸಾಯಿರಾಂ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಏರ್ಪಡಿಸಿದ್ದ ಅಂತರ ಕಾಲೇಜು ಭಾರ ಎತ್ತುವ ಸ್ಪರ್ಧೆಯಲ್ಲಿ ವಿಜೇತರಾದ ತಂಡಗಳಿಗೆ ಪ್ರಶಸ್ತಿ ಪ್ರದಾನ ಮಾಡಲಾಯಿತು.

**ವಿಜಯವಾಣಿ ಸುದ್ದಿಜಾಲ ಆನೇಕಲ್**

ಒಲಿಂಪಿಕ್ಸ್‌ನಲ್ಲಿ ಭಾರ ಎತ್ತುವ ಸ್ಪರ್ಧೆಯಲ್ಲಿ ದೇಶ ಉನ್ನತಮಟ್ಟದಲ್ಲಿ ಸಾಧನೆ ಮಾಡಬೇಕು ಎಂದು ಪ್ರಾಂಶುಪಾಲ ಡಾ. ಬಿ.ಷಡಾಕ್ಷರಪ್ಪ ಹೇಳಿದರು.

ಪಟ್ಟಣದ ಶ್ರೀ ಸಾಯಿರಾಂ ಕಾಲೇಜ್ ಆಫ್ ಇಂಜಿನಿಯರಿಂಗ್ ಕಾಲೇಜಿನಲ್ಲಿ ಮಂಗಳವಾರ ಏರ್ಪಡಿಸಿದ್ದ ಪುರುಷರು ಮತ್ತು ಮಹಿಳೆಯರಿಗೆ ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯ 20ನೇ ವಿಟಿಯು ಏಕ ವಲಯ ಅಂತರ ಕಾಲೇಜು ಭಾರ ಎತ್ತುವ ಸ್ಪರ್ಧೆಯಲ್ಲಿ ಮಾತನಾಡಿದರು. ಪ್ರತಿಯೊಬ್ಬ ಸ್ಪರ್ಧಿಯೂ ದೇಶದ ಕನಸು ನನಸಾಗಲು ಶ್ರಮಿಸಬೇಕು ಎಂದರು.

ಶಿಕ್ಷಣ ಸಂಸ್ಥೆ ಕಾರ್ಯನಿರ್ವಹಣಾಧಿಕಾರಿ ಶ್ರೀಸಾಯಿ ಪ್ರಕಾಶ್ ಲಿಯೋ, ಬೆಂಗಳೂರು ಎಸ್‌ಐಸಿಎಂ ದೈಹಿಕ ಶಿಕ್ಷಣ ನಿರ್ದೇಶಕ ಚಿಕ್ಕರಂಗಸ್ವಾಮಿ, ವಿಟಿಯು ದೈಹಿಕ ಶಿಕ್ಷಣ ನಿರ್ದೇಶಕ ಡಾ.ವೈ. ಎಚ್.ರಾಜೇಶ್, ವಿಟಿಯು ಬೆಂಗಳೂರು ದಕ್ಷಿಣ ವಲಯ ಪ್ರಾದೇಶಿಕ ನಿರ್ದೇಶಕ ಆರ್.ಶರವಣನ್, ಡಾ.ಸಂಗಪ್ಪ, ಪ್ರೊ.ಕೆ.ಎಸ್.ಐ.ಟಿ ಮತ್ತು ಡಾ.ಪ್ರಕಾಶ್, ಬಿ.ಐ.ಟಿ, ಕಾಲೇಜಿನ ಟ್ರಸ್ಟಿ ಕೆ.ಪಟೇಲ್, ಆಡಳಿತ ಪ್ರತಿನಿಧಿ ಡಾ.ಆರ್.ಅರುಣ್ ಕುಮಾರ್, ದೈಹಿಕ ಶಿಕ್ಷಣ ನಿರ್ದೇಶಕ ಶ್ರೀ ಮಂಜುನಾಥ ಇದ್ದರು.

ಮಹಿಳಾ ವಿಭಾಗದ ಬಾರ ಎತ್ತುವ ಸ್ಪರ್ಧೆಯಲ್ಲಿ ಶ್ರೀ ಸಾಯಿರಾಂ ತಾಂತ್ರಿಕ ಮಹಾವಿದ್ಯಾಲಯ ಮೂರು ಪದಕ ಪಡೆದುಕೊಂಡಿತು. ಕರ್ನಾಟಕದ ಒಟ್ಟು 47 ಇಂಜಿನಿಯರಿಂಗ್ ಕಾಲೇಜುಗಳಿಂದ ಸ್ಪರ್ಧಿಗಳು ಆಗಮಿಸಿದ್ದರು.

Sri SAIRAM
COLLEGE OF ENGINEERING
Anekal, Bengaluru

# ವಿಶ್ವವಾಣಿ

ವಿಶ್ವಾಸವೇ ವಿಶ್ವ

**Date: 17.10.2019** **Edition: Bengaluru**

## Newspaper - Vishwavani

### ಫೋಟೋನೂ ಸುದ್ದಿನೇ




ವಿಶ್ವೇಶ್ವರಯ್ಯ ತಾಂತ್ರಿಕ ಮಹಾವಿದ್ಯಾಲಯವು 20 ನೇ ವಿಟಿಯು ಏಕ ವಲಯ ಅಂತರ್ ಕಾಲೇಜು ತೂಕ ಎತ್ತುವಿಕೆ ಸ್ಪರ್ಧೆಯಲ್ಲಿ ಭಾಗವಹಿಸಿದ ದೇಹದಾರ್ಢ್ಯ ಪಟುಗಳು.

Page No.3

MJF. LN. LEO MUTHU
Founder Chairman - Sairam Institutions

Sairam INSTITUTIONS

ವಿಜಯ ಕರ್ನಾಟಕ

**Date: 17.10.2019** **Edition: Namma Bengaluru**

# Newspaper - Vijay Karnataka

## ಪೃಥ್ವಿರಾಜ್ 'ಮಿಸ್ಟರ್ ವಿಟಿಯು'




ಸಾಯಿರಾಮ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಆಯೋಜಿಸಿದ್ದ ವಿಟಿಯು ಅಂತರ್ ಕಾಲೇಜು ದೇಹದಾರ್ಢ್ಯ ಸ್ಪರ್ಧೆಯಲ್ಲಿ ವಿಜೇರಿಗೆ ಬಹುಮಾನ ವಿತರಿಸಲಾಯಿತು.

**■ ವಿಕ ಸುದ್ದಿಲೋಕ** ಆನೇಕಲ್

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ವತಿಯಿಂದ ಗುಡ್ಡನಹಳ್ಳಿ ಸಮೀಪದ ಸಾಯಿರಾಮ್ ಕಾಲೇಜ್ ಆಫ್ ಎಂಜಿನಿಯರಿಂಗ್‌ನಲ್ಲಿ ಏರ್ಪಡಿಸಿದ್ದ ಅಂತರ್ ಕಾಲೇಜು ಭಾರ ಎತ್ತುವ ಸ್ಪರ್ಧೆಯಲ್ಲಿ ಪುರುಷರ ವಿಭಾಗದಲ್ಲಿ 'ಮಿಸ್ಟರ್ ವಿಟಿಯು ಪ್ರಶಸ್ತಿ'ಗೆ ಬೆಳಗಾವಿ ಕೆಎಲ್‌ಇ ಕಾಲೇಜಿನ ಪೃಥ್ವಿರಾಜ್ ಆಯ್ಕೆಯಾಗಿದ್ದಾರೆ. ಬೆಸ್ಟ್ ಪೋಸರ್ ಪ್ರಶಸ್ತಿಗೆ ಉಡುಪಿಯ ಎನ್‌ಎಂಎಎಂ ತಾಂತ್ರಿಕ ವಿದ್ಯಾಲಯದ ಪೃಥ್ವಿರಾಜ್ .ಪಿ.ಹೆಗ್ಡೆ ಭಾಜನರಾಗಿದ್ದಾರೆ ಮತ್ತು ಅತ್ಯುತ್ತಮ ದೇಹದಾರ್ಢ್ಯ ಪ್ರಶಸ್ತಿಗೆ ಬೆಂಗಳೂರಿನ ಜೆಸಿಇ ಕಾಲೇಜಿನ ರೂಪೇಶ್ ಚೌಹಾಣ್ ಭಾಜನರಾಗಿದ್ದಾರೆ.

ಉಡುಪಿಯ ಎನ್‌ಎಂಎಎಂ ತಾಂತ್ರಿಕ ವಿದ್ಯಾಲಯ ಚಾಂಪಿಯನ್ ಪ್ರಶಸ್ತಿ ಗಳಿಸಿದೆ. ಬಾರ ಎತ್ತುವ ಸ್ಪರ್ಧೆಯಲ್ಲಿ ಮಹಿಳೆಯರ ವಿಭಾಗದಲ್ಲಿ ಸಾಯಿರಾಮ್ ತಾಂತ್ರಿಕ ಮಹಾವಿದ್ಯಾಲಯದ ಜಿ.ಎಸ್. ಸ್ವಾತಿ, ಚೇತನಾ, ಕುಮೆತಾ ಶೈಲೀಲಾ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕಗಳನ್ನು ಪಡೆದಿದ್ದಾರೆ.



MJF.LN. LEO MUTHU
Founder Chairman - Sairam Institutions

Sairam INSTITUTIONS